O.S.No. 197/2007 D W -2

ದಿನಾಂಕ 30.08.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು : ವಾದಿ ಪರ ಶ್ರೀ.R.C. ವಕೀಲರಿಂದ :</u>

ಈ ದಾವೆಯನ್ನು ಗುರುಮಾದಪ್ಪನವರ ಮೇಲೆ ಶಂಭುಲಿಂಗೇಗೌಡರು ಹಾಕಿದ್ದಾರೆ. ದಾವಾ ಸ್ವತ್ತಿನ ಸರ್ವೆ ನಂ. 7/4, ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿಗೆ ಮಾತ್ರ ದಾವೆ ಹಾಕಿದ್ದಾರೆ. ಸದರಿ ಸ್ವತ್ತಿನ ಚಕ್ಕುಬಂಧಿ ಪೂರ್ವಕ್ಕೆ ಗುರುಮಾದಪ್ಪನವರ ಜಮೀನು, ಪಶ್ಚಿಮಕ್ಕೆ ನಮ್ಮದೇ ಸ್ವತ್ತು, ಉತ್ತರಕ್ಕೆ ಓಣಿ, ದಕ್ಷಿಣಕ್ಕೆ ನಾರಾಯಣರವರ ಸ್ವತ್ತು ಇದೆ. ನಮ್ಮ ಸ್ವತ್ತಿನ ಸರ್ವೆ ನಂ. 7/3. ಸದರಿ ಸ್ವತ್ತು ನನ್ನ ಹೆಸರಿನಲ್ಲಿ ಇದೆ ಎಂದು ತೋರಿಸಲು ದಾಖಲೆ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ಸರ್ವೆ ನಂ. 7/4 ರ ಪಶ್ಚಿಮಕ್ಕೆ ನನ್ನ ಸ್ವತ್ತು ಇಲ್ಲ ಎಂದರೆ ಸರಿಯಲ್ಲ.

ಗುರುಮಾದಪ್ಪನವರು (ಪ್ರತಿವಾದಿ)ನಾನು ಚಿಕ್ಕವನಿದ್ದಾನಿಗಿಂದ ಪರಿಚಯ. ಸರ್ವೆ ನಂ. 7/4 ರ ಸ್ವತ್ತು ವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ವಾದಿ ಸದರಿ ಸ್ವತ್ತಿನ ಸ್ವಾಧೀನದಲ್ಲಿರುವ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಪ್ರತಿವಾದಿ ಪುಟ್ಟಾಚಾರಿ ಮತ್ತು ಪ್ರಸಾದಚಾರಿಯವರಿಂದ ಖರೀದಿಸಿದ್ದಾರೆ. ಸುಮಾರು 20 ವರ್ಷಗಳ ಹಿಂದೆ ಖರೀದಿಸಿದ್ದಾರೆ, ವರ್ಷ, ತಿಂಗಳು ಗೊತ್ತಿಲ್ಲ. ಸದರಿ ಸ್ವತ್ತನ್ನು ಖರೀದಿಸುವಾಗ ನಾನು ಇರಲಿಲ್ಲ. ಪ್ರತಿವಾದಿ ಹೇಳಿದ ಮೇರೆಗೆ ನನಗೆ ಮಾಹಿತಿ ಇದೆ.

ಸದರಿ ಸ್ವತ್ತು ಪ್ರಸಾದಾಚಾರಿಯವರು ಚಿಕ್ಕಮಲ್ಲೇಗೌಡ ರಿಗೆ ಗೇಣಿಗೆ ಮಾಡಿಕೊಂಡು ಹೋಗಲು ನೀಡಿದ್ದರು ಎಂದರೆ ಸರಿಯಲ್ಲ. ಚಿಕ್ಕಮಲ್ಲೇಗೌಡ ರು ಸದರಿ ಸ್ವತ್ತನ್ನು ತಮ್ಮ ಹೆಸರಿಗೆ ಮಾಡುವಂತೆ ಲ್ಯಾಡ್ ಟ್ರಿಬ್ಯುನಲ್ ನಲ್ಲಿ ಪ್ರಸಾದಾಚಾರಿಯವರ ಮೇಲೆ ಪ್ರಕರಣ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

1979 ರಲ್ಲಿ ಸದರಿ ಸ್ವತ್ತು ಲ್ಯಾಡ್ ಟ್ರಿಬ್ಯುನಲ್ ಮುಖಾಂತರ ಚಿಕ್ಕ ಮಾದೇಗೌಡರ ಹೆಸರಿಗೆ ಮಂಜೂರಾಗಿದೆ ಎಂದರೆ ಗೊತ್ತಿಲ್ಲ. ನನಗೆ ಸದರಿ ಸ್ವತ್ತಿನ ಪಕ್ಕ ಯಾವುದೇ ಸ್ವತ್ತು ಇಲ್ಲದ ಕಾರಣ ಆ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಚಿಕ್ಕಮಲ್ಲೇಗೌಡರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಚಿಕ್ಕಮಲ್ಲೇಗೌಡರ ಮರಣಾನಂತರ ಅವರ ಕುಟುಂಬಸ್ಥರಾದ ವಾದಿಗಳು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಚಿಕ್ಕಮಲ್ಲೇಗೌಡರ ಪರವಾಗಿ ಲ್ಯಾಡ್ ಟ್ರಿಬ್ಯುನಲ್ ನಲ್ಲಿ ಆದೇಶವಾದ ಕಾರಣ ಪ್ರಸಾದಾಚಾರಿಯವರಿಗೆ ಪ್ರತಿವಾದಿಗೆ ಮಾರಾಟ ಮಾಡಲು ಯಾವುದೇಹಕ್ಕು ಇರಲಿಲ್ಲ ಎಂದರೆ ಗೊತ್ತಿಲ್ಲ. ನಾನು ಪ್ರತಿವಾದಿಯ ಪರವಾಗಿ ಕ್ರಯವಾದ ದಿನಾಂಕ, ತಿಂಗಳು ಮತ್ತು ವರ್ಷವನ್ನು ವಕೀಲರಿಗೆ ಹೇಳಿ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಮುಂದುವರೆದು ಸಾಕ್ಷಿ ನಾನು ಕೇವಲ ವಕೀಲರಿಗೆ ಕ್ರಯದ ಬಗ್ಗೆ ಹೇಳಿದ್ದೇನೆ, ದಿನಾಂಕ, ತಿಂಗಳು ಬಗ್ಗೆ ಹೇಳಿಲ್ಲ ಎಂದು ನುಡಿಯುತ್ತಾರೆ.

ನಾನು ದೊಡ್ಡ ಕಬ್ಬಾಳಿನಲ್ಲಿ ವಾಸವಾಗಿಲ್ಲ, ನಾನು ಪ್ರತಿವಾದಿಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ, ಅವರೇ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ನನಗೂ ಮತ್ತು ವಾದಿಗೂ ದ್ವೇಷ ಇರುವ ಕಾರಣ ಅವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ ಯಾವುದೇಹಕ್ಕು ಸ್ವಾಧೀನ ಇಲ್ಲದಿದ್ದರೂ ಸಹ ಸುಳ್ಳು ದಾಖಲೆ ಸೃಷ್ಟಿಸಿ ನ್ಯಾಯಾಲಯದಲ್ಲಿ ಹಾಕಿದ್ದಾರೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲು ಮುಗಿಯಿತು.**</u>

<u>**ಮರು ವಿಚಾರಣೆ ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ